**ಓ ಎಸ್ ನಂಃ 586-14**
**ಡಿ ಡಬ್ಲ್ಯೂ ಃ 1**

**ದಿಃ 25-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್ ಎಸ್ ಎಸ್ ವಕೀಲರಿಂದ**

36. 1 ನೇ ಪ್ರತಿವಾದಿ ನನ್ನ ತಂದೆಯಾಗಬೇಕು. ನಾನು ಅವರ ಜೊತೆ ಈಗ ಮಾತನಾಡುವುದಿಲ್ಲ. ನಾನು ಕಳೆದ 5 ವರ್ಷಗಳಿಂದ ನನ್ನ ತಂದೆಯ ಜೊತೆ ಮಾತನಾಡುವುದಿಲ್ಲ. ನಾನು ಮತ್ತು ನನ್ನ ತಂದೆ ಬೇರೆ ಬೇರೆ ಮನೆಯಲ್ಲಿರುತ್ತೇವೆ. ನನ್ನ ತಾತನ ಹೆಸರು ಟಿ ನಾರಾಯಣಪ್ಪ ಆಗಿರುತ್ತಾರೆ. ನನ್ನ ತಾತನನ್ನು ನಾನು ನೋಡಿರುತ್ತೇನೆ. ಅವರು ದಿನಾಂಕಃ 15-02-1995 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾತ ವಾಸವಾಗಿದ್ದ ಮನೆ ನನ್ನ ಚಿಕ್ಕಪ್ಪರವರ ಭಾಗಕ್ಕೆ ಹೋಗಿರುತ್ತದೆ ಅದರಲ್ಲಿ ಯಾರು ವಾಸವಾಗಿರುತ್ತಾರೋ ನನಗೆ ಗೊತ್ತಿರುವುದಿಲ್ಲ.

37. ನನ್ನ ತಂದೆಯ ಮನೆ ಕೆಂಗೇರಿಯ ತಾವರೆಕೆರೆ ರಸ್ತೆಯಲ್ಲಿರುತ್ತದೆ. ಪ್ರಸ್ತುತ ದಾವೆಯನ್ನು ಹೂಡಿದ ದಿನಾಂಕದಂದು ನಾನು ಮಂಜುನಾಥನಗರದ ಮನೆಯಲ್ಲಿ ವಾಸವಾಗಿದ್ದೆ ನನ್ನ ತಂದೆಯವರು ಕೆಂಗೇರಿಯ ತಾವರೆಕೆರೆ ರಸ್ತೆಯಲ್ಲಿರುವ ಮನೆಯಲ್ಲಿ ವಾಸವಾಗಿದ್ದರು. ನನ್ನ ತಂದೆ ಇದ್ದ ಮನೆ ಪ್ರಸ್ತುತ ದಾವೆಯಲ್ಲಿ ಸೇರಿರುತ್ತದೆ. ನಾನು ಮಂಜುನಾಥನಗರದ ಬಾಡಿಗೆ ಮನೆಯಲ್ಲಿ 7 ವರ್ಷ ಬಾಡಿಗೆಕಟ್ಟಿಕೊಂಡು ಇದ್ದೆ.

38. ನನ್ನ ತಂದೆಗೆ ನಾನು ಒಬ್ಬನೇ ಮಗ ಇದ್ದು ಮತ್ತು ಆರು ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಂದೆಯ 7 ಜನ ಮಕ್ಕಳಲ್ಲಿ ನಾನು 3 ನೇ ಮಗನಾಗಿರುತ್ತೇನೆ. ನಾನು ಮತ್ತು ನನ್ನ ತಂದೆ 2003 ನೇ ಇಸವಿಯವರೆಗೂ ಜೊತೆಯಲ್ಲಿ ಇದ್ದೆವು. ನನ್ನ ತಂದೆ ಮತ್ತು ನಾನು ಜೊತೆಯಲ್ಲಿ ಇರುವುದನ್ನು ತೋರಿಸಲು ನನ್ನ ಹತ್ತಿರ ಯಾವುದೇ ಸಾರ್ವಜನಿಕ ದಾಖಲೆ ಇಲ್ಲ. 2003-04 ನೇ ಇಸವಿಯಲ್ಲಿ ನನ್ನ ಸಹೋದರಿಯರಾದ ಪ್ರತಿವಾದಿ 5, 6 ಮತ್ತು 7 ರವರಿಗೆ ಮದುವೆಯಾಗಿರಲಿಲ್ಲ. ನಾನು, ನನ್ನ ತಂದೆ ಮತ್ತು ಪ್ರತಿವಾದಿ 5 ರಿಂದ 7 ರವರ ಜೊತೆ ಒಟ್ಟು ಕುಟುಂಬದಲ್ಲಿ 2003 ರಲ್ಲಿ ವಾಸಮಾಡುತ್ತಿದ್ದೆವು. ನನ್ನ ತಂದೆಯ ಮೊದಲನೇ ಮಗಳು ಯಶೋಧಮ್ಮ (ವಾದಿ 1), 2 ನೇ ಮಗಳು ದಿವಂಗತ ಶಾರದಮ್ಮ, 3 ನೇ ಮಗಳು ಟಿ ಆರ್ ಸವಿತಾ (ವಾದಿ 2) ಆಗಿರುತ್ತಾರೆ.

39. ನನ್ನ ತಂದೆಗೆ ಈ ವಿಚಾರಣೆ ನಡೆಯುವ ಸಮಯಕ್ಕೆ 83 ವರ್ಷ ವಯಸ್ಸಾಗಿರುತ್ತದೆ. ನನ್ನ ತಂದೆಯ ಆರೋಗ್ಯ ಚೆನ್ನಾಗಿರುತ್ತದೆಯೋ ಇಲ್ಲವೋ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ. ನಾನು ನನ್ನ ತಂದೆಯ ಆರೋಗ್ಯವನ್ನು 3 ವರ್ಷಗಳ ಹಿಂದೆ ವೈಯಕ್ತಿಕವಾಗಿ ವಿಚಾರಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ತಂದೆಯ ಆರೋಗ್ಯದ ಬಗ್ಗೆ ನಾನು ಹೇಳಿರುತ್ತೇನೆಯೋ ಇಲ್ಲವೋ ನನಗೆ

ಗೊತ್ತಿಲ್ಲ. ನನ್ನ ತಂದೆಗೆ ನಾನು ಒಬ್ಬನೇ ಮಗನಾಗಿದ್ದು ಯಾವ ಕಾರಣಕ್ಕೆ ನಾನು ನನ್ನ ತಂದೆಯ ಆರೋಗ್ಯ ವಿಚಾರಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ನನ್ನ ಜೊತೆ ಮಾತನಾಡುವುದಿಲ್ಲ ಆದ್ದರಿಂದ ನಾನು ಅವರ ಆರೋಗ್ಯದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ.

40. ನನ್ನ ತಂದೆ ಈ ದಿನ ಬೆಳಗಿನ ಜಾವ ನ್ಯಾಯಾಲಯಕ್ಕೆ ಅವರ ವಕೀಲರ ಜೊತೆ ಹಾಜರಾಗಿದ್ದರು ಎಂದರೆ ಗೊತ್ತಿಲ್ಲ, ನಾನು ನೋಡಿಲ್ಲ.

41. ಪ್ರಸ್ತುತ ದಾವೆಯ ಎಲ್ಲಾ ವಿಷಯಗಳನ್ನು 2013 ರಿಂದ ಇಲ್ಲಿಯವರೆಗೂ ನಾನು ತಿಳಿದುಕೊಂಡಿರುತ್ತೇನೆ. ವಾದಿ 1 ರವರ ಮದುವೆ 1984 ರಲ್ಲಿ ಆಗಿರುತ್ತದೆ. ನನ್ನ ತಂದೆಯೇ ವಾದಿ 1 ರವರ ಮದುವೆಯನ್ನು ಮಾಡಿರುತ್ತಾರೆ. ಶಾರದಮ್ಮರವರ ಮದುವೆ 1989-90 ರಲ್ಲಿ ಆಗಿದ್ದು ಅವರ ಮದುವೆಯೂ ಕೂಡ ನನ್ನ ತಂದೆಯೇ ಮಾಡಿರುತ್ತಾರೆ. ಪ್ರತಿವಾದಿ 3 ಮತ್ತು 4 ರವರ ತಾಯಿ ಶಾರದಮ್ಮರವರು ಯಾವಾಗ ತೀರಿಕೊಂಡರುತ್ತಾರೆ ಎಂದು ನನಗೆ ಸ್ಪಷ್ಟವಾಗಿ ನೆನಪಿರುವುದಿಲ್ಲ. 2 ನೇ ವಾದಿಯ ಮದುವೆಯನ್ನು ನನ್ನ ತಂದೆಯವರು 1994 ರಲ್ಲಿ ಮಾಡಿರುತ್ತಾರೆ.

42. 5 ನೇ ಪ್ರತಿವಾದಿಯ ಮದುವೆ 2002 ನೇ ಇಸವಿಯಲ್ಲಿ ಆಗಿದ್ದು, ಪ್ರತಿವಾದಿ 6 ಮತ್ತು 7 ರವರ ಮದುವೆ 2004 ರಲ್ಲಿ ಆಗಿರುತ್ತದೆ. 2004 ರ ವೇಳೆಗೆ ಮದುವೆಯಾದ ನಂತರ ನನ್ನ ಸಹೋದರಿಯರು ಅವರವರ ಗಂಡಂದಿರ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ಸಹೋದರಿಯರು ನಮ್ಮ ಮನೆಗೆ ಆಗಾಗ ಬರುವುದು ಹೋಗುವುದು ಮಾಡುತ್ತಿದ್ದರು ಎಂದರೆ ಸರಿ. ನನ್ನ ಸಹೋದರಿಯರ ಮದುವೆ ನಂತರ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ತಂದೆ ಇಬ್ಬರೇ ಗಂಡಸರು ಇದ್ದೆವು ಎಂದರೆ ಸರಿ.

43. ಪ್ರಸ್ತುತ ದಾವೆಯಲ್ಲಿ ನನ್ನ ಮಗ ರಾಘವರವರನ್ನು ಪ್ರತಿವಾದಿ 9 ಆಗಿ ಸೇರ್ಪಡೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮಗ ಪ್ರತಿವಾದಿ 9 ದಿನಾಂಕಃ 07-09-2005 ರಲ್ಲಿ ಜನಿಸಿರುತ್ತಾರೆ. ಈ ದಿನ ಪ್ರತಿವಾದಿ 9 ರವರು ಮೇಜರ್ ಆಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ 9 ರವರ ಹೆಸರಿಗೆ 2012 ರ ದಾನಪತ್ರ ಇರುತ್ತದೆ ಎಂದರೆ ಸರಿ. ಅವರ ಹೆಸರಿನಲ್ಲಿರುವ ದಾನಪತ್ರ ನಮ್ಮ ಪಿತ್ರಾರ್ಜಿತ ಸ್ವತ್ತುಗಳಾದ ಸರ್ವೆ ನಂ 118/2 ರಲ್ಲಿ 6 ಗುಂಟೆ, ಸರ್ವೆ ನಂ 118/1 ರಲ್ಲಿ 6 ಗುಂಟೆ, ಸರ್ವೆ ನಂ 70 ರಲ್ಲಿ 2 ಎಕರೆ 33 ಗುಂಟೆ, ಸರ್ವೆ ನಂ 64 ರಲ್ಲಿ 14 ಗುಂಟೆ ಜಮೀನುಗಳು ಇರುತ್ತದೆ. ನನ್ನ ಮಗ ಪ್ರತಿವಾದಿ 9 ರವರ ಹೆಸರಿನಲ್ಲಿರುವ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಪ್ರತಿವಾದಿ 9 ರವರಿಗೆ ನಾನು ಮತ್ತು ನನ್ನ ತಂದೆ ದಾನಪತ್ರವನ್ನು ಬರೆದುಕೊಟ್ಟಿರುತ್ತೇವೆ. ನಮ್ಮ ತಾತನ ಆಸ್ತಿಯನ್ನು ನನಗೂ ಮತ್ತು ನನ್ನ ತಂದೆಗೆ ಜಂಟಿಯಾಗಿ ವಿಭಾಗ ಪತ್ರದಲ್ಲಿ ಬಂದಿದ್ದು ಅದನ್ನು ನಾವು ದಾನಪತ್ರದ ಮೂಲಕ 9 ನೇ ಪ್ರತಿವಾದಿರವರಿಗೆ ನೀಡಿರುತ್ತೇವೆ.

44. ಸದರಿ ದಾನಪತ್ರವು ನಿಡಿ 18 ಎಂದು ಈಗಾಗಲೇ ಗುರುತಿಸಲಾಗಿದೆ. ನಿಡಿ 18 ನ್ನು ಸಾಕ್ಷಿ

ನೋಡುತ್ತಿದ್ದು ಸದರಿ ನಿಡಿ 18ರಲ್ಲಿ ಅವರ ಧರ್ಮಪತ್ನಿಯಾದ 8ನೇ ಪ್ರತಿವಾದಿ ಕೂಡ ಮೈನರ್ ಗಾರ್ಡಿಯನ್ ಆಗಿ ನನ್ನ ಮಗನ ಪರವಾಗಿ ಸದರಿ ನಿಡಿ 18ರಲ್ಲಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆ ಹಾಕುವ ಮುಂಚೆ ನಿಡಿ 18ನ್ನು ನೊಂದಣಿ ಮಾಡಲಾಗಿರುತ್ತದೆ. ನಿಡಿ 18ರಲ್ಲಿ ನನ್ನ ಧರ್ಮಪತ್ನಿ 8ನೇ ಪ್ರತಿವಾದಿಯನ್ನು ಮೈನರ್ ಗಾರ್ಡಿಯನ್ ಆಗಿ ನೇಮಕಾತಿ ಮಾಡಿರುವ ದುರುದ್ದೇಶ ಏನು ಎಂದರೆ ಸಾಕ್ಷಿಯು ನನ್ನ ತಂದೆಯ ಆದೇಶದ ಮೇರೆಗೆ ಅವರನ್ನು ಮೈನರ್ ಗಾರ್ಡಿಯನ್ ಆಗಿ ನಾನು ನೇಮಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾನಪತ್ರ ನಿಡಿ 18ರಲ್ಲಿ ನನ್ನ ತಂದೆಗೆ ಮೈನರ್ ಗಾರ್ಡಿಯನ್ ಆಗಿ ನನ್ನ ಹೆಂಡತಿಯನ್ನು ನೇಮಕ ಮಾಡಿರುವ ಕಾರಣಗಳು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನಿಡಿ 18ರ ಪುಟ 3, 4 ಮತ್ತು 6ರಲ್ಲಿ ಆ ಉದ್ದೇಶ ಬರವಣಿಗೆಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಿಡಿ 18ರಲ್ಲಿ ಆ ರೀತಿಯ ಬರವಣಿಗೆ ಇರುವುದಿಲ್ಲ ನನ್ನ ಬಾಯಿ ಮಾತು ಆಗಿರುತ್ತದೆ ಎಂದರೆ ಸರಿಯಲ್ಲ.

45. ನಿಡಿ 21 ನನ್ನ ತಂದೆ ನನಗೆ ಬರೆದುಕೊಟ್ಟಿರುವ ದಾನಪತ್ರವಾಗಿರುತ್ತದೆ. ನಿಡಿ 21 ರ ಪ್ರಕಾರ ನನ್ನ ತಂದೆ ನನಗೆ ಸರ್ವೆ ನಂ 121/1ರಲ್ಲಿ 3 ಎಕರೆ 14 ಗುಂಟೆ ಜಮೀನನ್ನು ದಾನ ಕೊಟ್ಟಿರುತ್ತಾರೆ. ನಿಡಿ 21 ರಲ್ಲಿ ತೋರಿಸಲಾಗಿರುವ ಸ್ವತ್ತು ನನ್ನ ತಂದೆ ಕ್ರಯದ ಮುಖಾಂತರ ಖರೀದಿ ಮಾಡಿರುತ್ತಾರೆ. ನನ್ನ ತಂದೆ ಸದರಿ ಸ್ವತ್ತನ್ನು ಖರೀದಿ ಮಾಡಿರುವ ಬಗ್ಗೆ ನಿಡಿ 21ರಲ್ಲಿ ಬರವಣಿಯಲ್ಲಿರುತ್ತದೆ. ನಿಡಿ 21 ರಲ್ಲಿ ಹೇಳಲಾಗಿರುವ ಸ್ವತ್ತನ್ನು ನನ್ನ ತಂದೆ ಖರೀದಿ ಮಾಡಿರುವ ಕ್ರಯಪತ್ರವನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನಿಡಿ 21ರಲ್ಲಿ ಸದರಿ ಕ್ರಯಪತ್ರದ ಬರವಣಿಗೆ ಇರುತ್ತದೆ ಸದರಿ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲಾತಿಯು ನನ್ನ ಹತ್ತಿರ ಇರುತ್ತದೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

46. ನನ್ನ ತಂದೆಯಿಂದ ನನಗೆ ಮತ್ತು ನನ್ನ ಮಗನಿಗೆ ನಿಡಿ 21 ಮತ್ತು 18 ಬಿಟ್ಟು ಬೇರೆ ಯಾವುದೇ ದಾನಪತ್ರಗಳು ಆಗಿರುವುದಿಲ್ಲ. ಅದೇ ರೀತಿ ನನ್ನ ಹೆಸರಿಗೆ ಬೇರೆ ಯಾವುದೇ ಆಸ್ತಿಗಳನ್ನು ವರ್ಗಾವಣೆಮಾಡಿರುವ ದಾಖಲಾತಿಗಳು ನನ್ನ ತಂದೆ ಮಾಡಿಕೊಟ್ಟಿರುವುದಿಲ್ಲ. ನನ್ನ ತಂದೆಗೆ ಮತ್ತು ನನಗೆ ನನ್ನ ಮಗನಿಗೆ ಮಾಡಿಕೊಟ್ಟ ನಿಡಿ 21ರಲ್ಲಿರುವ ಪಿತ್ರಾರ್ಜಿತ ಸ್ವತ್ತುಗಳಿದ್ದು ಅದೇ ರೀತಿ ನಿಡಿ 18ರಲ್ಲಿರುವ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆ.

47. ಪ್ರತಿವಾದ ಪತ್ರದಲ್ಲಿ ನಮ್ಮ ವಕೀಲರಿಗೆ ನಾನು ಏನು ಹೇಳಬೇಕೋ ಅದನ್ನು ಬರೆದು ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದರೆ ಸರಿ. ನನ್ನ ಪ್ರತಿವಾದ ಪತ್ರದಲ್ಲಿ ನಮ್ಮ ತಾತನ ಕಾಲದಲ್ಲಿ ನಡೆದಿರುವ ವಿಚಾರಗಳನ್ನು ಮತ್ತು ಇಲ್ಲಿಯವರೆಗೂ ನಡೆದಿರುವ ವಿಚಾರಗಳನ್ನು ಬರೆದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ತಂದೆಯವರು ಕೂಡ ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ಅದನ್ನು ನಾನು

ಓದಿರುವುದಿಲ್ಲ. ನನ್ನ ತಂದೆಯವರು ಸಲ್ಲಿಸಿರುವ ಲಿಖಿತ ಪ್ರತಿವಾದ ಪತ್ರ ನನಗೆ ಸಿಕ್ಕಿರುವುದಿಲ್ಲ ಆದ್ದರಿಂದ ಅದನ್ನು ನಾನು ಓದಿರುವುದಿಲ್ಲ. ನನ್ನ, ನನ್ನ ತಂದೆ ಮತ್ತು ನನ್ನ ಪತ್ನಿಯ ಲಿಖಿತ ಪ್ರತಿವಾದ ಪತ್ರದಲ್ಲಿ ಇರುವ ಎಲ್ಲಾ ಒಕ್ಕಣೆಗಳು ಒಂದೇ ಆಗಿದ್ದು ಅದನ್ನು ನಾನೇ ನ್ಯಾಯಾಲಯಕ್ಕೆ ಬರೆದು ಹಾಕಿಸಿರುತ್ತೇನೆ ಎಂದರೆ ಸುಳ್ಳು.

**48.** ನನ್ನ ಮಗ ಪ್ರತಿವಾದಿ **9** ರವರು ಮೇಜರ್ ಆಗಿರುವುದರಿಂದ ನನ್ನ ಧರ್ಮಪತ್ನಿ **8** ನೇ ಪ್ರತಿವಾದಿ ಪ್ರಸ್ತುತ ದಾವೆಗೆ ಅವಶ್ಯಕ ಪಕ್ಷಗಾರರು ಆಗಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಧರ್ಮಪತ್ನಿಗೆ ನಾನು ನನ್ನ ಸ್ವಯಾರ್ಜಿತ ಸ್ವತ್ತಾದ ಸರ್ವೆ ನಂ **48/5** ನ್ನು ದಾನ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ದಾನಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಂಡತಿಗೆ ದಾನಪತ್ರ ಮಾಡುವ ದುರುದ್ದೇಶ ಏನು ಇರುತ್ತದೆ ಎಂದರೆ ನನಗೆ ದುರುದ್ದೇಶ ಇರುವುದಿಲ್ಲ ಪ್ರೀತಿ ವಾತ್ಸಲ್ಯ ಇರುವುದರಿಂದ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಹೆಂಡತಿ ಪ್ರತಿವಾದಿ **8** ರವರು ನಮ್ಮ ಕುಟುಂಬದ ಸದಸ್ಯರಲ್ಲ ಸೊಸೆ ಎಂದರೆ ಸುಳ್ಳು. ನನ್ನ ಪತ್ನಿ ಮತ್ತು ನನ್ನ ಮಗ ಪ್ರತಿವಾದಿ **9** ರವರ ಪರವಾಗಿ ನನಗೆ ಸಾಕ್ಷ್ಯ ನೀಡಲು ಅಧಿಕಾರ ಇರುವುದಿಲ್ಲ ಎಂದರೆ ಸುಳ್ಳು. ನನ್ನ ಪ್ರಕಾರ ಸೃಷ್ಟಿತ ಎರಡು ದಾನಪತ್ರಗಳ ಆಧಾರದ ಮೇಲೆ ನಾನು ಪ್ರತಿವಾದಿ **8** ಮತ್ತು **9** ರವರು ಮಾಲೀಕರು ಎಂದು ಹೇಳುತ್ತಿದ್ದೇನೆ ಎಂದರೆ ಸರಿ.

**49.** ನಮ್ಮ ಕುಟುಂಬದಲ್ಲಿ ಈಗಲೂ ಅವಿಭಾಜ್ಯ ಆಗದೇ ಇರುವ ಜಂಟಿ ಆಸ್ತಿಗಳು ಇರುತ್ತವೆ ಎಂದರೆ ಸುಳ್ಳು. ನನ್ನ ತಂದೆ ಮತ್ತು ನನ್ನ ತಾತನ ಆಸ್ತಿಯಲ್ಲಿ ಎಲ್ಲರಿಗೂ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಮೊದಲಿಗೆ ಸರಿ ಎಂದು ಹೇಳಿ ನಂತರ ನನ್ನ ತಂದೆಯ ಆಸ್ತಿಯಲ್ಲಿ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ **16** ರ ಮೇಲೆ ಡುಪ್ಲಿಕೇಟ್ ಎಂದು ಬರೆದಿದ್ದು ಅದು ಯಾವ ಪತ್ರ ಎಂದರೆ ಸಾಕ್ಷಿಯು ಸದರಿ ವಿಭಾಗ ಪತ್ರ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನಿಡಿ **16** ರಲ್ಲಿ ನನ್ನ ಸಹಿ ಇರುತ್ತದೆ. ನಿಡಿ **16** ವಿಭಾಗ ಪತ್ರ ನನ್ನ, ನನ್ನ ತಂದೆ ಪ್ರತಿವಾದಿ **1**, ನನ್ನ ಸಹೋದರಿಯರಾದ **5** ನೇ ಪ್ರತಿವಾದಿ, **6** ನೇ ಪ್ರತಿವಾದಿ, **7** ನೇ ಪ್ರತಿವಾದಿ, ನನ್ನ ಮೃತ ಸಹೋದರಿ ಶಾರದಮ್ಮರವರ ಮಕ್ಕಳಾದ ಪ್ರತಿವಾದಿ **3** ಮತ್ತು **4** ರವರ ನಡುವೆ ಆಗಿರುತ್ತದೆ.

**50.** ನಿಡಿ **16** ರಲ್ಲಿ ವಯಸ್ಸಾದ ನನ್ನ ತಂದೆ ವಯಸ್ಸಿನಲ್ಲಿರುವ ನನ್ನನ್ನು ಮನೆಯಿಂದ ಹೊರಗೆ ಕಳುಹಿಸಿರುತ್ತಾರೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ನಿಡಿ **16** ರಲ್ಲಿ ಬರೆಸಲು ಏನು ತೊಂದರೆ ಇತ್ತು ಎಂದರೆ ಗೊತ್ತಿಲ್ಲ. ಸದರಿ ಪತ್ರಕ್ಕೆ ಶಾರದಮ್ಮರವರ ಗಂಡನನ್ನು ಸಾಕ್ಷಿ ಹಾಕಲು ಕರೆಸಿರಲಿಲ್ಲ. ಶಾರದಮ್ಮರವರಿಗೆ ಅವರ ಗಂಡ ಕೂಡ ವಾರಸುದಾರರು ಎನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. ನಿಡಿ **16** ರಲ್ಲಿ ವಾದಿಗಳನ್ನು ಸೇರಿಸಿರುವುದಿಲ್ಲ. ನಿಡಿ **16** ರಲ್ಲಿ ವಾದಿಗಳನ್ನು ಸೇರಿಸದೇ

ಇರುವ ದುರುದ್ದೇಶಕ್ಕೆ ನಾನೇ ಕಾರಣ ಎಂದರೆ ಸಾಕ್ಷಿಯು ನನ್ನ ತಂದೆ ಕಾರಣರಾಗಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ 1 ಮತ್ತು 2 ರವರು ನಿಡಿ 16 ರಲ್ಲಿ ಬಂದು ಸಹಿ ಮಾಡಬೇಕೆಂದು ನಾನು ತಕರಾರು ವ್ಯಕ್ತಪಡಿಸಿರುತ್ತೇನೆಯೇ ಎಂದರೆ ಸಾಕ್ಷಿಯು ವಾದಿ 1 ಮತ್ತು 2 ರವರು ಸದರಿ ನಿಡಿ 16 ರಲ್ಲಿ ಇರಬೇಕೆನ್ನುವ ಆಶಯ ನನಗೆ ಇದ್ದು ನನ್ನ ತಂದೆಯ ಹತ್ತಿರ ವಾದಿ 1 ಮತ್ತು 2 ರವರನ್ನು ನಿಡಿ 16 ರಲ್ಲಿ ತರಲು ಕೇಳಿದ್ದೆ ಎಂದು ನುಡಿಯುತ್ತಾರೆ. ನಿಡಿ 16 ರಲ್ಲಿ ವಾದಿ 1 ಮತ್ತು 2 ರವರು ಹೆಣ್ಣು ಮಕ್ಕಳು ನನ್ನ ತಂದೆಗೆ ಇರುತ್ತಾರೆ ಎಂದು ಹೇಳಿರುವುದಿಲ್ಲ.

ಪ್ರಶ್ನೆಃ ನಿಡಿ 16 ಆಗುವ ಸಂದರ್ಭದಲ್ಲಿ ವಾದಿ 1 ಮತ್ತು 2 ರವರನ್ನು ಸೇರಿಸದೇ ಇರುವ ಕಾರಣ ನಾನು ಅದರಲ್ಲಿ ಸಹಿ ಹಾಕುವುದಿಲ್ಲ ಎಂದು ಬರಬಹುದಾಗಿತ್ತು ಆದರೆ ನಾನು ಸದರಿ ನಿಡಿ 16 ರಲ್ಲಿ ಆಸ್ತಿಗಳನ್ನು ಪಡೆಯುವ ಉದ್ದೇಶದಿಂದ ನಿಡಿ 16 ರಲ್ಲಿ ಸಹಿ ಮಾಡಿದ್ದು ಆಸ್ತಿಗಳನ್ನು ಪಡೆದು ದಾನಪತ್ರಗಳನ್ನು ಸೃಷ್ಟಿಸಿ ಈಗ ಹೀಗೆ ಸಾಕ್ಷಿ ಏಕೆ ನುಡಿಯುತ್ತಿದ್ದೀರಾ ?

ಉತ್ತರಃ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

ನಿಡಿ 16 ರಲ್ಲಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರನ್ನು ಸೇರಿಸದೇ ವಿಭಾಗ ಪತ್ರ ಆಗಿರುವ ಕಾರಣ ನಿಡಿ 16 ನ್ನು ಮಾಡಿಕೊಂಡ ನಂತರವೂ ನಾನು ರದ್ದತಿಗೆ ಕ್ರಮ ಜರುಗಿರುವುದಿಲ್ಲ ಎಂದರೆ ಸರಿ. ನನಗೆ ನನ್ನ ಸಹೋದರಿಯರಾದ ವಾದಿಗಳನ್ನು ನಿಡಿ 16 ವಿಭಾಗ ಪತ್ರದಲ್ಲಿ ಸೇರಿಸಬೇಕೆನ್ನುವ ಮನೋಭಾವ ಇತ್ತು ಎಂದು ನುಡಿಯುತ್ತಾರೆ. ನಿಡಿ 16 ವಿಭಾಗ ಪತ್ರ ಸರಿಯಾಗಿ ವಿಭಾಗವಾಗಿರುವುದಿಲ್ಲ ಅದನ್ನು ರದ್ದುಮಾಡಬೇಕೆಂದು ಯಾವುದೇ ನ್ಯಾಯಾಲಯ ಅಥವಾ ಪ್ರಾಧಿಕಾರದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ.

51. ನಿಡಿ16 ವಿಭಾಗ ಪತ್ರದಲ್ಲಿ ನನಗೆ ಆಸ್ತಿಗಳು ಬಂದಿರುತ್ತವೆ. ಸದರಿ ವಿಭಾಗ ಪತ್ರದಲ್ಲಿ ನನ್ನ ತಂದೆಗೂ ಆಸ್ತಿಗಳು ಬಂದಿರುತ್ತವೆ. ಅದೇ ರೀತಿ 5 ರಿಂದ 7 ರವರಿಗೂ ಕೂಡ ಆಸ್ತಿಗಳ ಹಿಸ್ಸೆ ನೀಡಿರುತ್ತೇವೆ ಎಂದರೆ ಸರಿ. ವಾದಿ 1 ಮತ್ತು 2 ರವರನ್ನು ನಿಡಿ 16 ರಲ್ಲಿ ಆಸ್ತಿಗಳ ಹಿಸ್ಸೆ ಕೊಡಬಾರದು ಎನ್ನುವ ಮನೋಭಾವ ಏಕೆ ಇತ್ತು ಎಂದರೆ ಸಾಕ್ಷಿಯು ನನಗೆ ವಾದಿ 1 ಮತ್ತು 2 ರವರಿಗೆ ಆಸ್ತಿ ಕೊಡಬೇಕೆಂದು ಇತ್ತು ಎಂದು ನುಡಿಯುತ್ತಾರೆ. ನಿಡಿ 16 ರಲ್ಲಿ ಆಗಿರುವ ವಿಭಾಗ ಸರಿಯಾಗಿ ಇಲ್ಲದ ಕಾರಣ ಈಗಲೂ ವಾದಿಗಳಿಗೆ ವಿಭಾಗ ಮಾಡಿ ಅವರಿಗೆ ಬರಬೇಕಾಗಿರುವ ಹಿಸ್ಸೆಯನ್ನು ಕೊಡಲು ನಾನು ಸಿದ್ದನಾಗಿರುತ್ತೇನೆ.

52. ಸಾಕ್ಷಿಗೆ ಪ್ರತಿವಾದಿ 1 ರವರು ನ್ಯಾಯಾಲಯಕ್ಕೆ ಸಲ್ಲಿಸಿರುವ ಮೆಮೋವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಮೆಮೋ ಸಲ್ಲಿಸಿರುತ್ತಾರೆ ಅದರ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮೆಮೋವನ್ನು ನಿಸಿ-1 ಎಂದು ಗುರುತಿಸಲಾಯಿತು. ನಿಸಿ1 ನ್ನು ನನ್ನ ಗಮನಕ್ಕೆ

ಯಾರು ತರಬೇಕಾಗಿತ್ತು ಎಂದರೆ ನನ್ನ ತಂದೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಸದರಿ ಮೆಮೋ ನಿಸಿ1ನ್ನು ನ್ಯಾಯಾಲಯಕ್ಕೆ ನೀಡಿರುವ ಬಗ್ಗೆ ನನ್ನ ಗಮನಕ್ಕೆ ತರುವ ಜವಾಬ್ದಾರಿ ಇತ್ತು ಎಂದು ನುಡಿಯುತ್ತೇನೆ. ನಾನು ವಿಷಯದಿಂದ ಆಚೆಗೆ ಹೋಗಿ ನನ್ನ ವೈಯಕ್ತಿಕ ಪ್ರಬುದ್ಧತೆಯನ್ನು ತೋರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೂ ನನಗೂ ವೈಯಕ್ತಿಕವಾಗಿ ಯಾವುದೇ ವಿರೋಧ ಇರುವುದಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**